

# ಕಪ್ಪೆಗೆ ಭೂಕಂಪನ ಗೊತ್ತಾಗುತ್ತೆ!

**ಏ. 30ರಂದು ಕಪ್ಪೆಗಳ ಸಂರಕ್ಷಣಾ ದಿನ. ನಶಿಸುತ್ತಿರುವ ಕಪ್ಪೆಗಳ ಸಂಖ್ಯೆ ಹೆಚ್ಚಾಗುವುದು ಸಾಧ್ಯವೆ?**

★ ಗುರುರಾಜ. ಕೆ.ವಿ.

'ಜರ್ನಲ್ ಆಫ್ ಜುವಾಲಜಿ' ಎಂಬ ವೈಜ್ಞಾನಿಕ ನಿಯತಕಾಲಿಕೆಯಲ್ಲಿ, ಇತ್ತೀಚೆಗೆ ಇಂಗ್ಲೆಂಡ್‌ನ ವಿಜ್ಞಾನಿಗಳಾದ ಡಾ.ರಾಚೆಲ್ ಎ. ಗ್ರಾಂಟ್ ಮತ್ತು ಪ್ರೊ. ಟಿಮ್ ಹಾಲಿಡೆ, ಕಪ್ಪೆಗಳ ಬಗ್ಗೆ ಅತ್ಯಂತ ಕೂತೂಹಲಕರ ವೈಜ್ಞಾನಿಕ ಸಂಶೋಧನೆಯೊಂದನ್ನು ಪ್ರಕಟಿಸಿದ್ದಾರೆ. ಈ ವಿಜ್ಞಾನಿಗಳು, ಇಟಲಿಯ ಲಾ ಕ್ವಿಲಾ ಪ್ರಾಂತ್ಯದಲ್ಲಿ ನಡೆಸಿದ ಸಂಶೋಧನೆಯಿಂದ, 'ಕಪ್ಪೆಗಳು ಭೂಕಂಪದ ಸೂಚನೆ ನೀಡಬಲ್ಲವು' ಎಂದು ತಿಳಿದು ಬಂದಿದೆ.

ಭೂಕಂಪ ಸಂಭವಿಸುವ ಐದು ದಿನಗಳಷ್ಟು ಮೊದಲೇ, ಹೇರಳ ಸಂಖ್ಯೆಯಲ್ಲಿದ್ದ ಗಂಡು ಕಪ್ಪೆಗಳು ಭೂಕಂಪ ಕೇಂದ್ರ ಬಿಂದುವಿನಿಂದ (ಎಪಿ ಸೆಂಟರ್‌ನಿಂದ) ಕಣ್ಮರೆಯಾಗತೊಡಗಿದ್ದವು. ಭೂಕಂಪದ ದಿನಗಳಲ್ಲಿ ಒಂದೂ ಗಂಡು ಕಪ್ಪೆ ಆ ಸ್ಥಳದಲ್ಲಿ ಸಿಗಲಿಲ್ಲ. ಭೂಕಂಪದ ತರುವಾಯ ಎರಡು– ಮೂರು ದಿನಗಳಲ್ಲಿ ಗಂಡು ಕಪ್ಪೆಗಳು ಅಷ್ಟೇ ಸಂಖ್ಯೆಯಲ್ಲಿ ಪುನಃ ಕಾಣಿಸಿಕೊಂಡವು. ವಾತಾವರಣದಲ್ಲಿ ಇರುವ ಆಯಾನೋಸ್ಪೆರ್ ಪದರವು, ಭೂಕಂಪದಿಂದ ಹೊರಡುವ ಅತೀ ಕೆಳಮಟ್ಟದ ತರಂಗಗಳಿಂದ ಬದಲಾವಣೆ ಹೊಂದುತ್ತದೆ. ಈ ಬದಲಾವಣೆ ಭೂಕಂಪ ಸಂಭವಿಸುವ ಮೊದಲ ವಾರದಲ್ಲಿಯೇ ತಿಳಿಯುತ್ತದೆ. ಈ ರೀತಿ ಆಯಾನೋಸ್ಪೆರ್ನಲ್ಲಿ ಆದ ಬದಲಾವಣೆ ಮತ್ತು ಅದಕ್ಕೆ ಅನುಗುಣವಾಗಿ ಕಪ್ಪೆಗಳ ಸಂಖ್ಯೆಯಲ್ಲಿ ಆದ ಇಳಿಮುಖದ ಸಂಬಂಧವನ್ನು ಗಣನೆಗೆ ತೆಗೆದುಕೊಂಡು, ವಿಜ್ಞಾನಿಗಳು 'ಕಪ್ಪೆಗಳು ಭೂಕಂಪ ಮುನ್ಸೂಚನೆ ನೀಡುತ್ತವೆ' ಎಂಬ ನಿರ್ಧಾರಕ್ಕೆ ಬಂದಿದ್ದಾರೆ.

ಈ ಹಿಂದೆ ಸಸ್ತನಿಗಳಿಗೆ, ಪಕ್ಷಿಗಳಿಗೆ, ಇರುವೆಗಳಿಗೆ, ಇಲಿಗಳಿಗೆ ಮತ್ತು ಸಾಕು ಪ್ರಾಣಿಗಳಾದ ನಾಯಿ, ದನ, ಬೆಕ್ಕು, ಕೋಳಿಗಳಿಗೂ ಭೂಕಂಪದ ಮುನ್ಸೂಚನೆಗಳು ಸಿಗುತ್ತವೆ ಎಂದು ವಿಜ್ಞಾನಿಗಳು ತಿಳಿಸಿದ್ದರು. ಆದರೆ ಅವುಗಳ ಬಗ್ಗೆ ವೈಜ್ಞಾನಿಕವಾಗಿ ಸಂಶೋಧನೆ ನಡೆಸಿರಲಿಲ್ಲ. ಪ್ರಸ್ತುತ ಸಂಶೋಧನೆ ಪ್ರಾಯಶಃ ವೈಜ್ಞಾನಿಕ ಜಗತ್ತಿನಲ್ಲಿ ಮೊದಲನೆಯದು. ಭೂಕಂಪದ ಮುನ್ಸೂಚನೆ ನೀಡುವಲ್ಲಿ ಕಪ್ಪೆಗಳ ಪಾತ್ರದ ಬಗ್ಗೆ ನಡೆದ ಏಕೈಕ ಸಂಶೋಧನೆಯೂ ಹೌದು. ಜಾಗತಿಕ ಮಟ್ಟದಲ್ಲಿ ಕಪ್ಪೆಗಳ ಸಂಖ್ಯೆ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ, ಈ ಸಂಶೋಧನೆಯ ಫಲಿತಾಂಶ ಹೊರಬಿದ್ದಿದೆ. ಕಪ್ಪೆಗಳ ಸಂತತಿ ಹೆಚ್ಚಲು ಈ ಸಂಶೋಧನೆ ನೆರವಾಗಬಹುದು.

ಇದೇ ಏಪ್ರಿಲ್ 30ರಂದು 'ಕಪ್ಪೆಗಳ ಸಂರಕ್ಷಣಾ ದಿನ' ಇದೆ. ಕಪ್ಪೆಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಇದು ಸಕಾಲ. ಆ ಮೂಲಕ ಪರಿಸರವನ್ನು ಉಳಿಸುವ ಕೆಲಸವನ್ನೂ ಮಾಡಬಹುದು.

